SC No.26/2022
CW-01 / PW-04

# ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು

## ಸತ್ರ ಮೊಕದ್ದಮೆ ಸಂಖ್ಯೆ 26/2022

ಚಾ.ಸಾಃ 01 ಪ್ರಾ.ಸಾಃ 04

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 24.12.2025

| | | |
|---|---|---|
| ಸಾಕ್ಷಿಯ ಹೆಸರು | : | ಎಂ.ಎ. ಅಜೀಜ್ |
| ತಂದೆಯ ಹೆಸರು | : | ಎಂ.ಎ. ಸಲೀಂ |
| ವಯಸ್ಸು | : | 64 ವರ್ಷ |
| ಉದ್ಯೋಗ | : | ನಿವೃತ್ತ ಪಿ.ಎಸ್.ಐ |
| ವಿಳಾಸ | : | ಹೈದ್ರಾಬಾದ |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ವಡಗೇರಾ ಪೋಲಿಸ್ ಠಾಣೆಯಲ್ಲಿ ಅಪರಾದ ವಿಭಾಗದಲ್ಲಿ ಪಿ.ಎಸ್.ಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದಾಗ, ಚಾಸಾ-4, 6 ಸಿಪಿಐ ಕಛೇರಿಯಲ್ಲಿ ಹೆಚ್.ಸಿ ಎಂದು ಕರ್ತವ್ಯ ನಿರ್ವಹಿಸುತ್ತಿರುವಾಗ, ಚಾಸಾ-7 ಯಾದಗಿರಿ ಪೋಲಿಸ್ ಠಾಣೆಯಲ್ಲಿ ಹೆಚ್.ಸಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವಾಗ, ವಡಗೇರಾ ಪೋಲಿಸ್ ಠಾಣೆಯ ಗುನ್ನೆ ನಂ.74/2021 ರಲ್ಲಿ ನನ್ನನ್ನು ಮತ್ತು ಚಾಸಾ-4 ರಿಂದ 7 ರವರನ್ನು ದೇವಸ್ಥಾನದ ಮೂರ್ತಿ ಕಳ್ಳತನವಾದ ಬಗ್ಗೆ ಆರೋಪಿತರನ್ನು ಪತ್ತೆ ಮಾಡಲು ಸಿಪಿಐ ಮತ್ತು ಡಿ.ವೈ.ಎಸ್.ಪಿ ರವರು ನೇಮಿಸಿದ್ದರು.

02. ದಿನಾಂಕ 13.07.2021 ರಂದು ಮಾಹಿತಿ ಬಂದ ಮೇರೆಗೆ ಹೇಮನಾಳ ಗ್ರಾಮಕ್ಕೆ ನಾವುಗಳು ಹೋದಾಗ ಮಃ03.00 ಗಂಟೆಗೆ ಹನುಮಾನ ದೇವರ ಗುಡಿ ಹತ್ತಿರ ಹೊನ್ನಪ್ಪ ನಾಯಕ, ಫಾರುಕ್ ಇವರನ್ನು ಹಿಡಿಯಲು ಹೋದಾಗ ಫಾರುಕ್ ಓಡಿ ಹೋದನು. ಹೊನ್ನಪ್ಪ ನಾಯಕನನ್ನು ನಾವು ಹಿಡಿದೆವು. ಅಲ್ಲಿ ಜನರು ಬಂದರು, ಅವರಿಗೆ

ಹೊನ್ನಪ್ಪ ನಾಯಕ ಶಂಕಿತ ಆರೋಪಿ ಇರುವುದಾಗಿ ಮತ್ತು ಕರೆದುಕೊಂಡು ಹೋಗುವುದಾಗಿ ತಿಳಿಸಿ ಅವನನ್ನು ಕರೆದುಕೊಂಡು ಹೊರಟೆವು. ಗಬ್ಬೂರು ಮುಖ್ಯರಸ್ತೆಯಲ್ಲಿ ನಾವು ಹೋಗುತ್ತಿದ್ದಾಗ 04.00 ಗಂಟೆ ಅಥವಾ 04.30 ರ ಸಮಯದಲ್ಲಿ ಜನರ ಗುಂಪು ಬಡಿಗೆ, ಕಲ್ಲು ಮಾರಕಾಸ್ತ್ರಗಳನ್ನು ತೆಗೆದುಕೊಂಡು ಬಂದು ನಮ್ಮ ಜೀಪ್ ನಿಲ್ಲಿಸಿ ನಮ್ಮನ್ನು ಹೊಡೆದರು. ಹೊನ್ನಪ್ಪ ನಾಯಕನನ್ನು ಕರೆದುಕೊಂಡು ಹೋಗುವ ಉದ್ದೇಶದಿಂದ ಈ ರೀತಿ ಮಾಡಿದರು. ಆರೋಪಿ ಹನುಮಂತಪ್ಪ ನನಗೆ ಬಡಿಗೆಯಿಂದ ತಲೆಗೆ ಹೊಡೆಯಲು ಬಂದನು, ನಾನು ಬಲಗೈ ಅಡ್ಡ ಹಿಡಿದೆನು. ಆ ಮೇಲೆ ಒಬ್ಬನು ನನಗೆ ಮರ್ಮಾಂಗಕ್ಕೆ ಕಾಲಿನಿಂದ ಒದ್ದನು. ಒಬ್ಬನು ಚಾಸಾ.5 - ಮಲ್ಲಪ್ಪನಿಗೆ ಬಡಿಗೆಯಿಂದ ಎಡಗಣ್ಣಿನ ಮೇಲೆ ಹೊಡೆದೆನು. ಹರಿನಾಥ, ಗಜೇಂದ್ರ, ಗಣಪತಿ ಇವರಿಗೆ ಕೈಯಿಂದ, ಕಟ್ಟಿಗೆಯಿಂದ ಕಲ್ಲುಗಳಿಂದ ಹೊಡೆದರು. ಆಗ ಗಬ್ಬೂರು ಪೋಲಿಸ್ ಠಾಣೆಯ ಸಿಬ್ಬಂದಿ ಬಂದರು. ಈ ಘಟನೆ ರಾಯಕುಂಪಿ ಗ್ರಾಮದ ಹತ್ತಿರ ನಡೆದಿದೆ. ನಂತರ ಗಬ್ಬೂರು ಪಿ.ಎಸ್.ಐ ಮತ್ತು ಸಿಬ್ಬಂದಿ ಬಂದು ಬಿಡಿಸಿದರು ಮತ್ತು ನಮ್ಮನ್ನು ವಡಗೇರಾ ಆಸ್ಪತ್ರೆಗೆ ಕರೆದುಕೊಂಡು ಹೋದರು. ಡಿ.ಎಸ್.ಪಿ ಸಾಹೇಬರು ನಮ್ಮನ್ನು ಜೀಪಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆಸ್ಪತ್ರೆಯಲ್ಲಿ ನಾವು ಹೊರರೋಗಿಯಾಗಿ ಚಿಕಿತ್ಸೆ ಪಡೆದೆವು. ನಂತರ ಗಬ್ಬೂರು ಪೋಲಿಸ್ ಠಾಣೆಯಿಂದ ಹೆಚ್.ಸಿ 592 ಇವರು ಬಂದು ನನ್ನ ಹೇಳಿಕೆ ಪಡೆದಿದ್ದಾರೆ. ಸಾಕ್ಷಿ ಮತ್ತೆ ಹೇಳುತ್ತಾರೆ ಹೆಚ್.ಸಿ ನಂಬರ್ ಗೊತ್ತಿಲ್ಲ.

03. ದಿನಾಂಕ 14.07.2021 ರಂದು ಎಫ್.ಐ.ಆರ್ ಮಾಡಿದ್ದಾರೆ. ನಂತರ ಪೋಲಿಸರು ಏನು ಮಾಡುತ್ತಾರೆ ಎಂದರೆ ನಾವು ಮನೆಗೆ ಹೋದೆವು. ಆ ಮೇಲೆ ಕೇಸ್ ಆಗಿ ನಾವು ಮನೆಗೆ ಹೋದೆವು. ನಂತರ ಸಿಪಿಐ ರವರು ಆರೋಪಿತರನ್ನು ವಶಕ್ಕೆ ಪಡೆದು ನಂತರ ದಿನಾಂಕ 16.07.2021 ರಂದು ನಮ್ಮನ್ನು ಕರೆಯಿಸಿ ಐಡೆಂಟಿಫೈ ಮಾಡಿಸಿದ್ದಾರೆ.

04. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

05. ಸಾಕ್ಷಿಯು ಮು.ಮಾ.1 ರಿಂದ 3 ರ ಕಲ್ಲುಗಳನ್ನು ಮತ್ತು ಮು.ಮಾ.4 ಮತ್ತು 5 ರ ಕಟ್ಟಿಗೆಗಳನ್ನು ನೋಡಿ ಗುರುತಿಸಿರುತ್ತಾರೆ. ಈ ವಸ್ತುಗಳು ಎಲ್ಲಿ ಇದ್ದವು ಎಂದರೆ ಸಿಪಿಐ ರವರ ಆಫೀಸ್ ನಲ್ಲಿ ಇದ್ದವು. ಇವುಗಳಲ್ಲಿ ಎಲ್ಲಿ ನೋಡಿದ್ದಿರಾ ಎಂದರೆ ಘಟನಾ ಸ್ಥಳದಲ್ಲಿ ನೋಡಿದ್ದೆನೆ. ಘಟನಾ ಸ್ಥಳ ಯಾರು ತೋರಿಸಿದ್ದಾರೆ ಎಂದರೆ ನಾನೇ ತೋರಿಸಿದ್ದೇನೆ.

06. ಸಾಕ್ಷಿಯು ಗುರುತಿಸಿದ ದೂರನ್ನು **ನಿಪಿ.೨** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.೨(ಎ)** ಎಂದು ಗುರುತಿಸಲಾಯಿತು.

**ಆರೋಪಿತರ ಪರ ಶ್ರೀ ಎಸ್.ವಾಯ್ ವಕೀಲರಿಂದ ಪಾಟೀ ಸವಾಲುಃ-**

07. ದಿನಾಂಕ 13.07.2021 ರಂದು ಮುಖ್ಯಪೇದೆ ಎಸ್.ಹೆಚ್.ಓ ಇದ್ದರು, ಈಗ ನಾಲ್ಕು ವರ್ಷ ಆಗಿರುವುದರಿಂದ ಅವರ ಹೆಸರು ನೆನಪಿಲ್ಲ. ಎಸ್.ಹೆಚ್.ಡಿ ಕೈ ಬರಹದಲ್ಲಿ ಬರೆದಿದ್ದು ಇತ್ತು. ಸದರಿ ದಿನ ಚಾಸಾ-4 ರಿಂದ 7 ನಮ್ಮ ಠಾಣೆಗೆ ಬಂದು ರಿಪೋರ್ಟ್ ಮಾಡಿಕೊಂಡ ಬಗ್ಗೆ ಎಸ್.ಹೆಚ್.ಡಿ ನಮೂದು ಮಾಡಿದ್ದಾರೆ ಇಲ್ಲವೋ ನೆನಪಿಲ್ಲ. ಸದರಿ ದಿನ ಗಜೇಂದ್ರ ಸದರಿ ಜೀಪಿನ ಚಾಲಕ ಇದ್ದಿರಬಹುದು. ಗಜೇಂದ್ರ ವಾಹನ ಚಾಲನೆ ಮಾಡುತ್ತಿದ್ದನು ಎಂದು ನಾನು ಮೊದಲು ಎಲ್ಲಿಯೂ ಹೇಳಿಲ್ಲ ಎಂದರೆ ನಿಜ. ಖಾಸಗಿ ವಾಹನದ ಸಂಖ್ಯೆ ಗೊತ್ತಿಲ್ಲ ಮತ್ತು ಸದರಿ ವಾಹನದ ಮಾಲಿಕರು ಯಾರು ಎಂದು ಗೊತ್ತಿಲ್ಲ. ಸದರಿ ಖಾಸಗಿ ವಾಹನವನ್ನು ಪೋಲಿಸ್ ಠಾಣೆಗೆ ಯಾರು ತಂದಿದ್ದರು ಎಂದು ಗೊತ್ತಿಲ್ಲ. ವಾಹನದ ಲಾಗ್ ಬುಕ್ ಪ್ರತಿನ್ನು ದೂರಿನೊಂದಿಗೆ ಹಾಜರು ಪಡಿಸಿಲ್ಲ ಮತ್ತು ತನಿಖಾಧಿಕಾರಿಗೆ ಕೊಟ್ಟಿಲ್ಲ.

08. ಪೋಲಿಸ್ ಠಾಣೆಯಿಂದ ಹೇಮನಾಳ ಗ್ರಾಮ 35 ರಿಂದ 40 ಕಿ.ಮಿ ದೂರ ಇರುತ್ತದೆ. ವಡಗೇರಾ ದಿಂದ ಹೇಮನಾಳ ಗ್ರಾಮದ ಮಧ್ಯ ಸುಮಾರು 12 ರಿಂದ 15 ಹಳ್ಳಿಗಳು ಇರುತ್ತವೆ. 6-7 ಅಂತರದಲ್ಲಿ ಹಳ್ಳಿಗಳು ಬರುತ್ತದೆ. ಹೇಮನಾಳ ಪೋಲಿಸ್ ಠಾಣೆಯಿಂದ ಗಬ್ಬೂರು ಪೋಲಿಸ್ ಠಾಣೆ ಎಷ್ಟು ಕಿ.ಮಿ ದೂರ ಇದೆ ಎಂದರೆ ಐಡಿಯಾ ಇಲ್ಲ.

09. ಹೇಮನಾಳ ಗ್ರಾಮದಲ್ಲಿ ಹನುಮಾನ ಟೆಂಪಲ್ ಎತ್ತರದ ಸ್ಥಳದಲ್ಲಿ ಇದೆ. ಆ ದೇವಸ್ಥಾನದ ಮುಂದೆ ಎಡಕ್ಕೆ ಅಗಸಿ ಕಟ್ಟೆ ಮತ್ತು ಬಲಕ್ಕೆ ಸರಕಾರಿ ಶಾಲೆ ಇದೆ ಎನ್ನುವುದು ನಿಜ. ಸದರಿ ದೇವಸ್ಥಾನದ ಹಿಂದೆ ಟಿನ್ ಶೆಡ್ಡಿನ ಅಂಗಡಿ ಇದೆ ಎನ್ನುವುದು ನಿಜ. ಸದರಿ ಸ್ಥಳ ಜನ ಸಂದಣಿ ಇರುವ ಪ್ರದೇಶ ಎನ್ನುವುದು ನಿಜ. ಸದರಿ ದಿನ ಹನುಮಾನ ಗುಡಿ ಹತ್ತಿರ 15-20 ಜನ ಸೇರಿದ್ದರು. ಸರಕಾರಿ ಶಾಲೆಯ ಕಡೆಗೆ ಫಾರುಕ್ ಓಡಿ ಹೋದನು, ಪಿಸಿ ಆತನನ್ನು ಹಿಡಿಯಲು ಪ್ರಯತ್ನ ಮಾಡಿದನು, ಆದರೆ ಸಿಗಲಿಲ್ಲ. ಬೇರೆ ಜಿಲ್ಲೆಗೆ ಆರೋಪಿ ಪತ್ತೆಗೆ ಹೋದಾಗ ನಮ್ಮ ಜಿಲ್ಲೆಯ ವರಿಷ್ಠಪೋಲಿಸ್ ಅಧಿಕಾರಿಯಿಂದ ಬೇರೆ ಜಿಲ್ಲೆಯ ಪೋಲಿಸರಿಗೆ ಮಾಹಿತಿ ಕೊಡಲಾಗುತ್ತೆ ಎನ್ನುವುದು ನಿಜ. ಈ ಕೇಸಿನಲ್ಲಿ ಆರೋಪಿ ಪತ್ತೆಗೆ ಹೋಗಲು ಎಸ್.ಪಿ ರವರಿಂದ ಪರವಾನಿಗೆ ಪಡೆದಿಲ್ಲ ಮತ್ತು ಗಬ್ಬೂರು ಪೋಲಿಸ್ ಠಾಣೆಗೆ ಮಾಹಿತಿ ಕೊಟ್ಟಿಲ್ಲ. ಸದರಿ ದಿನ ನಾವು ಮಫ್ತಿಯಲ್ಲಿ ಇದ್ದೆವು, ಯುನಿಫಾರ್ಮ್ ನಲ್ಲಿ ಇರಲಿಲ್ಲ. ಹೊನ್ನಯ್ಯನನ್ನು ಅರೆಸ್ಟ ಮಾಡಿದಾಗ ಆತನ ಮನೆಯವರಿಗೆ ಲಿಖಿತ ಮಾಹಿತಿ ಕೊಟ್ಟಿಲ್ಲ. ಆತನ ಹೆಸರು, ತಂದೆ-ತಾಯಿ ಯಾರು ಎಂದು ನಾವು ಸ್ಥಳಿಯರನ್ನು ವಿಚಾರಣೆ ಮಾಡಿಲ್ಲ. ಆ ದಿನ ಹನುಮಾನ ದೇವಸ್ಥಾನದ ಹತ್ತಿರ ಸುಮಾರು ಒಂದುವರೆ ತಾಸು ಇದ್ದೆವು.

10. ಹನುಮಾನ ದೇವಸ್ಥಾನದಿಂದ ಗುನ್ನೆ ಸ್ಥಳ ಸುಮಾರು ಆರು ಕಿ.ಮಿ ದೂರದಲ್ಲಿ ಇದೆ. ಗುನ್ನೆ ಸ್ಥಳದ ಸುತ್ತ-ಮುತ್ತಲು ಮನೆಗಳು ಇಲ್ಲ. ಸಾಕ್ಷಿ ಮತ್ತೆ ಹೇಳುತ್ತಾರೆ ಪಶ್ಚಿಮಕ್ಕೆ ಮನೆ ಇದೆ. ಸದರಿ ಸ್ಥಳದಲ್ಲಿ ಬಹಳ

ಮನೆಗಳು ಇರುತ್ತವೆ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಪೂರ್ವಕ್ಕೆ ಮನೆಗಳು ಇಲ್ಲ. ಆ ದಿನ ಹನುಮಾನ ದೇವಸ್ಥಾನದಿಂದ ನಾವು ಹೊರಟಾಗ 03.50 ಅಥವಾ 03.55 ರ ಸಮಯವಾಗಿತ್ತು. ಗುನ್ಹಾ ಸ್ಥಳದಲ್ಲಿ ಆರೋಪಿತರು ನಮ್ಮ ವಾಹನ ತಡೆದಾಗ 04.30 ರ ಸಮಯವಾಗಿತ್ತು.

11. ಈ ಪ್ರಕರಣದಲ್ಲಿ ನಾನು ದೂರು ಕೊಟ್ಟಿದ್ದೇನೆ. ಆಸ್ಪತ್ರೆಯಲ್ಲಿ ಮೌಖಿಕ ಹೇಳಿಕೆ ಮೂಲಕ ದೂರು ಕೊಟ್ಟಿದ್ದೇನೆ. ಹೆಚ್.ಸಿ ದೂರನ್ನು ಬರೆದಿದ್ದಾರೆ, ನಂತರ ನಾನು ಸಹಿ ಮಾಡಿದ್ದೇನೆ. ಈಗ ತೋರಿಸಿದ ನಿಪಿ.9 ರ ದೂರನ್ನು ಬೆರಳಚ್ಚು ಮಾಡಲಾಗಿದೆ ಎನ್ನುವುದು ನಿಜ. ಸದರಿ ದಿನ ಆಸ್ಪತ್ರೆಯಲ್ಲಿ ಹೆಚ್.ಸಿ ಬರೆದುಕೊಂಡ ದೂರು ನಿಪಿ.9 ರ ದೂರು ಅಲ್ಲ. ಈಗ ತೋರಿಸಿದ ನಿಪಿ.9 ರಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ನಾನು ಓದಿ ಸಹಿ ಮಾಡಿದ್ದೇನೆ. ಸಾಕ್ಷಿ ಸ್ವತಃ ಹೇಳುತ್ತಾರೆ ನಿಪಿ.9 ರ ದೂರನ್ನು ನಂತರ ಟೈಪ್ ಮಾಡಿಕೊಂಡು ತಂದಿದ್ದರು. ಸದರಿ ದೂರನ್ನು ಎಲ್ಲಿ ಟೈಪ್ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಮೊದಲು ಮೌಖಿಕವಾಗಿ ಹೇಳಿದ ದೂರಿಗೆ ಸಹಿ ಮಾಡಿದಾಗ ಸಮಯ ಎಷ್ಟು ಆಗಿತ್ತು ಎಂದು ನೆನಪಿಲ್ಲ. ನಿಪಿ.9 ರ ದೂರಿನಲ್ಲಿ ಸಹಿ ಮಾಡಿದಾಗ ಎಷ್ಟು ಸಮಯ ಆಗಿತ್ತು ಎಂದು ನೆನಪಿಲ್ಲ. ಮೊದಲು ಸಹಿ ಮಾಡಿದ ಎಷ್ಟು ತಾಸಿನ ಮೇಲೆ ನಿಪಿ.9 ಕ್ಕೆ ಸಹಿ ಮಾಡಿದ್ದೇನೆ ಎಂದು ನೆನಪಿಲ್ಲ.

12. ನ್ಯಾಯಾಲಯದಲ್ಲಿರುವ 1 ರಿಂದ 10 ನೇ ಆರೋಪಿತರ ಹೆಸರುಗಳನ್ನು ಹೇಳಲಾಗುವುದಿಲ್ಲ ಮತ್ತು ಆರೋಪಿತರನ್ನು ಪ್ರತ್ಯಕವಾಗಿ ಗುರುತಿಸಲು ಆಗುವುದಿಲ್ಲ. ಯಾರ ಕೈಯಲ್ಲಿ ಕಟ್ಟಿಗೆ ಇತ್ತು ಎಂದರೆ ಸಾಕ್ಷಿಯು ನ್ಯಾಯಾಲಯದಲ್ಲಿರುವ 4 ನೇ ಆರೋಪಿಯನ್ನು ತೋರಿಸಿ ಈತನು ಹನುಮಂತ ಮತ್ತು ಈತನ ಕೈಯಲ್ಲಿ ಕಟ್ಟಿಗೆ ಇತ್ತು ಎಂದು ಹೇಳಿರುತ್ತಾರೆ. 4 ನೇ ಆರೋಪಿಯ ಕೈಯಲ್ಲಿ ಕಟ್ಟಿಗೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಯಾರ ಕೈಯಲ್ಲಿ ಕಟ್ಟಿಗೆ ಇತ್ತು,

ಯಾರ ಕೈಯಲ್ಲಿ ಕಲ್ಲು ಇತ್ತು ಎಂದು ನಿಪಿ.9 ರ ದೂರಿನಲ್ಲಿ ಬರೆದಿಲ್ಲ. 50 ರಿಂದ 60 ಜನ ಅಕ್ರಮಕೂಟ ರಚಿಸಿಕೊಂಡು ಬಂದಿದ್ದರು ಎಂದು ನಿಪಿ.9 ರ ದೂರಿನಲ್ಲಿ ಬರೆಯಲಾಗಿದೆ.

13. ಈ ಘಟನೆ 04.20 ರಿಂದ 05.30 ಅಥವಾ 06.00 ಗಂಟೆವರೆಗೆ ನಡೆದಿದೆ. ಈ ಘಟನೆಯ ಬಗ್ಗೆ ಮೇಲಾಧಿಕಾರಿಗೆ ನಾವು ತಿಳಿಸಿಲ್ಲ, ಆದರೆ ಗಬ್ಬೂರು ಪೋಲಿಸರು ಬಂದ ಮೇಲೆ ತಿಳಿಸಿದ್ದಾರೆ. ಸಾಕ್ಷಿ ಮತ್ತೆ ಹೇಳುತ್ತಾರೆ ನಮ್ಮ ಸಿಬ್ಬಂದಿಯವರು ಮೇಲಾಧಿಕಾರಿಗೆ ತಿಳಿಸಿದ್ದಾರೆ. ಯಾವ ಸಿಬ್ಬಂದಿ ಮೇಲಾಧಿಕಾರಿಗೆ ತಿಳಿಸಿದ್ದಾರೆಂದು ಗೊತ್ತಿಲ್ಲ. ಆ ದಿನ ಗಬ್ಬೂರು ಪಿ.ಎಸ್.ಐ ಸ್ಥಳಕ್ಕೆ ಬಂದಾಗ 05.30 ಅಥವಾ 05.40 ಆಗಿರಬಹುದು. ಗಬ್ಬೂರು ಪಿ.ಎಸ್.ಐ ಬಂದಾಗ ನಾನು ಘಟನಾ ಸ್ಥಳದಲ್ಲಿ ಇದ್ದೆನು. ಗಬ್ಬೂರು ಪಿ.ಎಸ್.ಐ ಸ್ಥಳಕ್ಕೆ ಬಂದಾಗ ಜನರು ದಬ್ಬಾಡುತ್ತಿದ್ದರು, ಆಗ ಗಬ್ಬೂರು ಪಿ.ಎಸ್.ಐ ರವರು "ಇವರು ಪಿ.ಎಸ್.ಐ ಇದ್ದಾರೆ ಬಿಡಿರಿ" ಎಂದು ಹೇಳಿದರು. ಗಬ್ಬೂರು ಪಿ.ಎಸ್.ಐ ಸ್ಥಳಕ್ಕೆ ಬಂದ ಮೇಲೆ ನಾವು ಘಟನಾ ಸ್ಥಳದಲ್ಲಿ 10-15 ನಿಮಿಷ ಇದ್ದೆವು. ಗಬ್ಬೂರು ಪಿ.ಎಸ್.ಐ ಇವರು ಬಂದ ನಂತರ ಡಿ.ಎಸ್.ಪಿ ಬಂದರು. ಡಿ.ಎಸ್.ಪಿ ರವರು ಸ್ಥಳಕ್ಕೆ ಬಂದರು ಎಂದು ನಿಪಿ.9 ರ ದೂರಿನಲ್ಲಿ ಬರೆದಿಲ್ಲ. ಡಿ.ಎಸ್.ಪಿ ರವರು ಸ್ಥಳಕ್ಕೆ ಬಂದಾಗ ಎಷ್ಟು ಸಮಯ ಆಗಿತ್ತು ಎಂದರೆ ಗಬ್ಬೂರು ಪಿ.ಎಸ್.ಐ ಬಂದ 10-20 ನಿಮಿಷದ ನಂತರ ಡಿ.ಎಸ್.ಪಿ ರವರು ಬಂದಿದ್ದಾರೆ.

14. ಸ್ಥಳದಿಂದ ನಾವು ವಡಗೇರಾ ಆಸ್ಪತ್ರೆಗೆ ಹೋದೆವು. ನಾನು ಯಾದಗಿರಿ ಖಾಸಗಿ ಆಸ್ಪತ್ರೆಗೆ ಹೋಗಿಲ್ಲ. ಆ ದಿನದ ಎಸ್.ಹೆಚ್.ಡಿ ಯನ್ನು ನಾನು ಕರೆಕ್ಟಾಗಿ ನೋಡಿಲ್ಲ. ಯಾದಗಿರಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದೆ ಬಗ್ಗೆ ಆ ದಿನ ಎಸ್.ಹೆಚ್.ಡಿಯಲ್ಲಿ ನಮೂದು ಆಗಿದೆ ಎಂದರೆ ನನಗೆ ಗೊತ್ತಿಲ್ಲ (ಆರೋಪಪಟ್ಟಿಯ ಪುಟ ಸಂಖ್ಯೆ 81 ರ ಹಿಂಬದಿಯ ವಿವರಗಳನ್ನು ಸಾಕ್ಷಿಗೆ ತೋರಿಸಲಾಗಿದೆ. ಕ್ರಮ ಸಂಖ್ಯೆ 22). ನಂತರ

ಎಂ.ಎಲ್.ಸಿ ಕೊಟ್ಟಿರುವುದಾಗಿ ಸದರಿ ಎಸ್.ಹೆಚ್.ಡಿ ನಮೂದು ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ.

15. ಘಟನೆ ಸ್ಥಳದಲ್ಲಿ ಸೇರಿದ 50-60 ಜನರಲ್ಲಿ ಯಾರು ಏನು ಮಾಡಿದ್ದಾರೆ ಎಂದು ಹೇಳಲಾಗುವುದಿಲ್ಲ. ರಾಯಗುಂಪಿ ಗ್ರಾಮದ ಗ್ರಾಮಸ್ಥರು ಬಹಳ ಜನ ಘಟನೆ ಸ್ಥಳದಲ್ಲಿ ಸೇರಿದ್ದರು.

16. ಗಬ್ಬೂರು ಪ್ರಾಥಮಿಕ ಆರೋಗ್ಯ ಕೇಂದ್ರ ಹತ್ತಿರದಲ್ಲಿ ಇತ್ತು ಎನ್ನುವುದು ಸರಿಯಲ್ಲ. ನಮಗೆ ಗಂಭೀರ ಸ್ವರೂಪದ ಗಾಯಗಳು ಆಗಿದ್ದವೇ ಎಂದರೆ ಅದನ್ನು ವೈದ್ಯರು ಹೇಳಬೇಕು. ನನಗೆ ರಕ್ತಗಾಯಗಳು ಆಗಿರಲಿಲ್ಲ, ಒಳಪೆಟ್ಟು ಆಗಿತ್ತು. ಆ ದಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಾವು ರಾತ್ರಿ 01.00 ಗಂಟೆ ಅಥವಾ 01.30 ವರೆಗೆ ಇದ್ದೆವು. ನಾವು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋದ ಮೇಲೆ ನಮ್ಮ ಠಾಣೆಯ ಪಿ.ಎಸ್.ಐ ರವರಿಗೆ ಮಾಹಿತಿ ಕೊಟ್ಟಿದ್ದೆವು. ಈ ಘಟನೆ ಬಗ್ಗೆ ಠಾಣೆಯ ಎಸ್.ಹೆಚ್.ಡಿಯಲ್ಲಿ ನಮೂದು ಆಗಿದೆ.

17. ಮು.ಮಾ.1 ರಿಂದ 5 ರ ಕಟ್ಟಿಗೆ ಮತ್ತು ಕಲ್ಲುಗಳು ಎಲ್ಲ ಕಡೆ ಸಿಗುತ್ತವೆ ಎಂದರೆ ಸಾಕ್ಷಿಯು ಉತ್ತರಿಸಿರುವುದಿಲ್ಲ. ಮು.ಮಾ.1 ರಿಂದ 5 ರ ಕಟ್ಟಿಗೆ ಮತ್ತು ಕಲ್ಲುಗಳನ್ನು ಸಿಪಿಐ ಕಛೇರಿಯಲ್ಲಿ ಯಾರು ತಂದು ಇಟ್ಟಿದ್ದರು ಎಂದು ನನಗೆ ಗೊತ್ತಿಲ್ಲ.

18. ನನಗೆ ಮತ್ತು ನಮ್ಮ ಸಿಬ್ಬಂದಿಗೆ ಯಾವುದೇ ಗಾಯಗಳು ಆಗಿರಲಿಲ್ಲ ಎನ್ನುವುದು ಸುಳ್ಳು. ನಮ್ಮ ಮೇಲೆ ಯಾವುದೇ ಹಲ್ಲೆ ಆಗಿಲ್ಲ ಎನ್ನುವುದು ಸುಳ್ಳು. ಆರೋಪಿ ಹನುಮಂತ ಹೊಡೆದನು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಒಬ್ಬನು ಮರ್ಮಾಂಗಕ್ಕೆ ಒದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

19. ಡಿ.ಎಸ್.ಪಿ.ಯವರು ವೈದ್ಯರಿಗೆ ಫೋನ್ ಮಾಡಿ ಹೇಳಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ.

20. ಸದರಿ ಹೊನ್ನಪ್ಪ ನಾಯಕ ಈತನನ್ನು ಹನುಮಾನ ಟೆಂಪಲ್ ಹತ್ತಿರ ನಾವು ಅರೆಸ್ಟ ಮಾಡಿಲ್ಲ ಎನ್ನುವುದ ಸುಳ್ಳು. ಸದರಿ ಹೊನ್ನಪ್ಪ ನಾಯಕನನ್ನು ನಾವು ಜಮೀನಿನಲ್ಲಿ ದಸ್ತಗಿರಿ ಮಾಡಿದ್ದೇವೆ ಎನ್ನುವುದು ಸುಳ್ಳು. ಹೊನ್ನಪ್ಪ ನಾಯಕ ಇವರನ್ನು ಕಾನೂನು ಬಾಹಿರವಾಗಿ ದಸ್ತಗಿರಿ ಮಾಡಿದ್ದೆವು ಎನ್ನುವುದು ಸರಿಯಲ್ಲ. ಆ ಕಾರಣಕ್ಕಾಗಿ ಇವರೆಲ್ಲ ಪ್ರಶ್ನಿಸಿದ್ದಕ್ಕೆ ಇವರ ಮೇಲೆ ಸುಳ್ಳು ಕೇಸ್ ಹಾಕಿದ್ದೇವೆ ಎನ್ನುವುದು ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಈ ರೀತಿ ಕೇಸ್ ಹಾಕಿದರೆ ಅದರಿಂದ ಹೊರಗೆ ಬರುತ್ತೇವೆ ಎಂಬ ಕಾರಣದಿಂದ ಸುಳ್ಳು ಕೇಸ್ ಹಾಕಿದ್ದೇವೆ ಎನ್ನುವುದು ಸರಿಯಲ್ಲ. ಆರೋಪಿತರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಎನ್ನುವುದು ಸುಳ್ಳು.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.